# ಪ್ರಾರ್ಥನೆ

## ಶ್ರೀಶಾರದಾ ಸುಪ್ರಭಾತ

ಸಕಲ ಲೋಕದ ಮಾತೆ, ಪರಮಪುರುಷನಿಗೆ
ಶಕ್ತಿಸ್ವರೂಪಿಣಿಯೆ, ಶಿವೆ, ಕರುಣಾದ್ರ್ರಚಿತ್ತೆ,
ಲೋಕ ಶೋಕವ ಶಮಿಸಲವತರಿಸಿದವಳೆ,
ಶ್ರೀ ಶಾರದೆಯೆ, ಶಿವದೆ, ತವ ಸುಪ್ರಭಾತಂ ॥ ೧ ॥

ಭವತಮವ ಕಳೆಯೆ ಲೀಲಾಮನುಜವಪುವ
ಧರಿಸಿದ ಗದಾಧರನನೆಳವೆಯಲಿ ವರಿಸಿ,
ಮನವನೊಪ್ಪಿಸಿ, ಸಕಲ ವಿದ್ಯೆಗಳ ಪಡೆದ
ಶ್ರೀ ಶಾರದೆಯೆ, ಶಿವದೆ, ತವ ಸುಪ್ರಭಾತಂ ॥ ೨ ॥

ಯೌವನದಿ, ಪತಿ ಹುಚ್ಚನೆಂಬ ಅನುಚಿತದ
ಸುದ್ದಿಯ ನಿರಾಕರಿಸಿ ಕಾಣಲಾತನನು
ದೂರದುರ್ಗಮವಾದ ದಾರಿಯನು ನಡೆದ
ರಾಮಕೃಷ್ಣರ ದಯಿತೆ, ತವ ಸುಪ್ರಭಾತಂ ॥ ೩ ॥

ಪತಿಯು ಯತಿಯಾಗಿಹುದ ಕಂಡು ಕಂಗೆಡದೆ,
ತ್ರಿಕರಣವನರ್ಪಿಸಿದ ಪರಿಶುದ್ಧ ಚಿತ್ತೆ,
ಅವನ ಸಾಧನೆಯಂತ್ಯದಲಿ ಪೂಜೆಗೊಂಡ
ರಾಮಕೃಷ್ಣೇಶ್ವರಿಯೆ, ತವ ಸುಪ್ರಭಾತಂ ॥ ೪ ॥

ಭೇದವಿಲ್ಲದ ಗುರುವು ಸೇವೆಯಲಿ ನಿಂದ
ನಿನ್ನ ತಾಯೆಂದು, ಭವತಾರಿಣೀಯೆಂದು
ತಿಳಿದನಹ-ಸರ್ವಲೋಕ ಶರಣ್ಯಮೂರ್ತಿ
ರಾಮಕೃಷ್ಣರ ದಯಿತೆ, ತವ ಸುಪ್ರಭಾತಂ ॥ ೫ ॥

ಪರಶಕ್ತಿಯೆಂಬ ನಿಜಪ್ರಕೃತಿಯನು ಮರೆಸಿ,
ದುಃಖ ಭವಜಲಧಿಯಲಿ ಸಂಸಾರಿಣಿಯೊಲು
ಎಲ್ಲವನು ಸಹಿಸಿ, ಆಶ್ರಿತರನುದ್ಧರಿಪ
ರಾಮಕೃಷ್ಣರ ದಯಿತೆ, ತವ ಸುಪ್ರಭಾತಂ ॥ ೬ ॥



ಮನೆ ಗುಡಿಸುವಾಗ ಬಾಯ್ತುಪ್ಪಿ 'ಮಮ ಕರ್ಮ
ಮುಗಿಯದಗಣಿತ ಕರಗಳಿಂದ ಮಾಡಿದರೂ'
ಎಂದಖಿಲಶಕ್ತಿರೂಪವನು ಪ್ರಕಟಿಸಿದ
ರಾಮಕೃಷ್ಣರ ದಯಿತೆ, ತವ ಸುಪ್ರಭಾತಂ ॥ ೭ ॥

ಶ್ರೀರಾಮಕೃಷ್ಣ ಪ್ರಿಯೆ, ತದಧೀನಸತ್ತ್ವೆ,
ತದ್ಭಕ್ತವೃಂದ ಪಾಲಿನಿ, ಮುಕ್ತಿದಾತ್ರಿ,
ತದ್ಭಾವ ಸಂಸಕ್ತೆ, ತದಭಿನ್ನತತ್ತ್ವೆ,
ಸಕಲಲೋಕದ ಮಾತೆ, ತವ ಸುಪ್ರಭಾತಂ ॥ ೮ ॥

*— ಸ್ವಾಮಿ ಅಚಲಾನಂದ ಸರಸ್ವತಿ (ಅನು : ಡಾ. ಸಿ.ಪಿ.ಕೆ.)*

## ಸೂಕ್ತಿಪ್ರಭ

ನೀನು ಬಿಟ್ಟುಹೋಗುವುದು ಶಿಲಾಶಾಸನದಲ್ಲಿ ಬರೆಸಿದ್ದಲ್ಲ; ಇತರರ ಜೀವನದಲ್ಲಿ ನೀನು ಏನನ್ನು ಹೆಣೆದಿರುವೆಯೋ ಅದು ಮಾತ್ರ.

— ಪೆರಿಕ್ಲಿಸ್

ವಿಶ್ವಾಸವೆಂಬುದು ವಿದ್ಯುತ್ತಿನಂತೆ. ಅದನ್ನು ನೀವು ನೋಡಲಾರಿರಿ, ಆದರೆ ಬೆಳಕನ್ನು ಮಾತ್ರ ನೋಡುವಿರಿ.

— ಅಜ್ಞಾತ

ಮಾನವನಿಗೆ ಕಷ್ಟಗಳು ಅಗತ್ಯ – ಏಕೆಂದರೆ ಯಶಸ್ಸನ್ನು ಪಡೆಯಲು ಅವು ಅನಿವಾರ್ಯ.

— ಡಾ. ಅಬ್ದುಲ್ ಕಲಾಂ

ವಿದ್ಯಾಭ್ಯಾಸವೆಂಬುದು ಪಾತ್ರೆಗೆ ನೀರು ತುಂಬುವ ಕೆಲಸವಲ್ಲ; ಬೆಂಕಿ ಹಚ್ಚುವ ಕೆಲಸ.

— ವಿಲಿಯಂ ಬಟ್ಲರ್ ಯೇಟ್ಸ್

ನಡೆಯುವವರು ಎಡವುತ್ತಾರಲ್ಲದೆ, ಕುಳಿತವರು ಎಡವಬಲ್ಲರೆ?

— ರಾಘವಾಂಕ

ಸತತ ಪ್ರಯತ್ನವೇ ಯಶಸ್ಸಿಗೆ ಕೀಲಿಕೈ. ಬಾಗಿಲನ್ನು ಬಹಳ ಸಮಯದ ವರೆಗೆ ತಟ್ಟು, ಜೋರಾಗಿ ತಟ್ಟು. ಇದರಿಂದ ಯಾರಾದರೂ ಎದ್ದು ಬರಬಹುದು.

— ಹೆನ್ರಿ ವಾಡ್ಸವರ್ತ್ ಲಾಂಗ್‌ಫೆಲೋ